**ದಿನಾಂಕಃ 09.04.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲು: 1 ಮತ್ತು 2 ನೇ ಎದುರುದಾರರ ಪರ ವಕೀಲರಾದ ಶ್ರೀ.ಎಸ್.ಎ ರವರಿಂದಃ**

1) ನಾನು ಬಿ.ಎ. ಎಲ್.ಎಲ್.ಬಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ವಿದ್ಯಾಭ್ಯಾಸ ಮುಗಿದ ನಂತರ ನಾನು ವಕೀಲ ವೃತ್ತಿಯನ್ನು ಮಾಡಿರುವುದಿಲ್ಲ ಬದಲಿಗೆ ನೇರವಾಗಿ ನೌಕರಿಗೆ ಸೇರಿರುತ್ತೇನೆ.

2) ನಿ.ಆರ್.**9** ಎಂದು ಗುರುತು ಆಗಿರುವ ವಿಮಾ ಪಾಲಿಸಿಯನ್ನು ನಮ್ಮ ಸಂಸ್ಥೆಯಿಂದಲೇ ಕೊಡಲಾಗಿದೆ ಎಂದರೆ ಸರಿ. ನಿ.ಆರ್.**9** ರಲ್ಲಿ **issuance date** ಎಂಬ ಕಡೆ **22.06.2020** ಎಂದು ಮುದ್ರಣ ಆಗಿದೆ ಎಂದರೆ ಸರಿ.

3) ಬೆಂಗಳೂರಿನ ಎಂ.ಎಂ.ಟಿ.ಸಿ **3** ನೇ ನ್ಯಾಯಾಲಯದಲ್ಲಿ ಅರುಣ್ ಕುಮಾರ್ ರವರ ವಿರುದ್ಧ ಆಗಿದ್ದಂತಹ ಕ್ರಿಮಿನಲ್ ಪ್ರಕರಣ ಅಂದರೆ ಸಿ.ಸಿ.**4752 OF 2020** ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಅದೇ ರೀತಿ ಸಿ.ಸಿ.**4752 OF 2020** ಪ್ರಕರಣದಲ್ಲಿ ದಿಃ **06.12.2023** ರಂದು ತೀರ್ಪು ಬಂದಿದೆ ಮತ್ತು ಸದರಿ ಅರುಣ್ ಕುಮಾರ್ ರವರನ್ನು ನಿರಪರಾಧಿ ಎಂದು ಬಿಡುಗಡೆ ಮಾಡಲಾಗಿದೆ ಎಂದರೆ

ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

4) ಯಾವುದೇ ಒಂದು **Compact disc** ಅನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದಾಗ ಯಾವ ವಿಷಯದ ಬಗ್ಗೆ ಆ ಸಿಡಿಯನ್ನು ಹಾಜರಪಡಿಸಲಾಗಿರುತ್ತದೆಯೋ ಆ ಸಂಪೂರ್ಣ ವಿಷಯಗಳು ಆ ಸಿಡಿಯಲ್ಲಿ ಲಭ್ಯ ಇರಬೇಕು ಎಂದರೆ ಸರಿ.

5) ನಿ.ಆರ್.**14** ಎಂದು ಗುರುತು ಆಗಿರುವ ದಾಖಲೆಯಲ್ಲಿ ಅಥವಾ ಸಿಡಿಯಲ್ಲಿ ಕೇವಲ ನಿ.ಆರ್.**10** ಎಂದು ಗುರುತು ಆಗಿರುವ ದಾಖಲೆಯ ಬಗ್ಗೆ ಮಾತ್ರ ಮಾಹಿತಿಗಳು ಲಭ್ಯ ಇದೆ ಮತ್ತು ನಿ.ಆರ್.**11** ಎಂದು ಗುರುತು ಆಗಿರುವ ದಾಖಲೆಯ ಬಗ್ಗೆ ಮಾಹಿತಿ ಲಭ್ಯ ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಿ.ಆರ್.**10** ಎಂದು ಗುರುತು ಆಗಿರುವ ದಾಖಲೆಯು **insurance policy** ಮಾಹಿತಿಯನ್ನು ಒಳಗೊಂಡಿದೆ.

6) ನಿ.ಆರ್.**10** ಮತ್ತು ನಿ.ಆರ್.**11** ಎಂದು ಗುರುತು ಆಗಿರುವ ದಾಖಲೆಯನ್ನು **Excel sheet** ನಲ್ಲಿ ತಯಾರು ಮಾಡಲಾಗಿದೆ ಮತ್ತು **Excel sheet** ನಲ್ಲಿ ಒಂದು ಮಾಹಿತಿಯನ್ನು ತಯಾರು ಮಾಡುವ ಸಮಯದಲ್ಲಿ ಮೂಲ ದಾಖಲೆಯಲ್ಲಿ ಇರುವ ವಿವರಗಳನ್ನು ಬದಲಾಯಿಸಿ ಮುದ್ರಣ ಅಥವಾ ಪ್ರಿಂಟ್ ತೆಗೆಯುವ ಸಾಧ್ಯತೆ ಇರುತ್ತದೆ ಮತ್ತು ಆ

ಕಾರಣದಿಂದ ನಿ.ಆರ್.**10** ಮತ್ತು **11** ಎಂದು ಗುರುತು ಆಗಿರುವ ದಾಖಲೆಗಳಿಗೆ ಯಾವುದೇ ಮಾನ್ಯತೆ ಇರುವುದಿಲ್ಲ ಎಂದರೆ ಸುಳ್ಳು.

**ಈ ಹಂತದಲ್ಲಿ ಪಾಟೀ ಸವಾಲು ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.